ಕ್ರ.ಸಂ. 3, 148ನೇ ಭಾಷೆಕುರ

<u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯವಾದ ದಿನಾಂಕ.8-12-2022ರ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ "ಶುಚಿ ಯೋಜನೆಗೆ ಗ್ರಹಣ"- 3 ವರ್ಷದಿಂದ ಸ್ಯಾನಿಟರಿ ನ್ಯಾಪ್ ಕಿನ್ ವಿತರಣೆ ಸ್ಥಗಿತ ವಿಚಾರವು ವರದಿಯಾಗಿರುತ್ತದೆ.**

**ರಾಜ್ಯದ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳಲ್ಲಿ, ಓದುತ್ತಿರುವ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್ ಕಿನ್ ವಿತರಿಸುವ "ಶುಚಿ ಯೋಜನೆ" ಜಾರಿಗೆ ತಂದಂಥ ಸರ್ಕಾರ ಕೆಲವೇ ವರ್ಷಗಳಲ್ಲಿ ಯೋಜನೆಯನ್ನು ತೆರೆಗೆ ಸರಿಸುತ್ತಿರುವ ಬಗ್ಗೆ, ಅನುಮಾನ ವ್ಯಕ್ತವಾಗಿದ್ದು, ಕೋವಿಡ್ ತರುವಾಯ ಶುಚಿ ಯೋಜನೆ ಸ್ಥಗಿತಗೊಂಡಿದೆ.**

**ಹೆಣ್ಣುಮಕ್ಕಳು ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಲಿ ಎಂಬ ಉದ್ದೇಶದಿಂದ ಜಾರಿಗೆ ತಂದಂಥ ಈ ಯೋಜನೆಯ ಜವಾಬ್ದಾರಿಯನ್ನು ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತವು ನ್ಯಾಪ್ ಕಿನ್ ಖರೀದಿಸಿ ವಿತರಿಸುವ ಹೊಣೆ ಹೊತ್ತಿತ್ತು. ಅಂದಾಜು 47 ಕೋಟಿ ರೂ. ವೆಚ್ಚದ ಯೋಜನೆಯಡಿ ಸುಮಾರು 20 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಇದ್ದಾರೆ, ಇದೀಗ ಅಧಿಕಾರಿಗಳ ನಿರ್ಲಕ್ಷದಿಂದಾಗಿ ಯೋಜನೆ ಸ್ಥಗಿತಗೊಂಡಿರುವುದು ತಿಳಿದುಬಂದಿರುತ್ತದೆ. ಕಳೆದ ಮೂರು ವರ್ಷಗಳಿಂದ ಬರೀ ಟೆಂಡರ್ ಕರೆಯುವುದು ಮತ್ತು ರದ್ದು ಮಾಡುವ ಪ್ರಕ್ರಿಯೆಯಲ್ಲೇ ಅಧಿಕಾರಿಗಳು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿರುತ್ತದೆ.**

**ಈ ಹಿಂದೆ ಸತತ 5 ವರ್ಷಗಳಿಂದ ಸರಕಾರಿ ಸ್ವಾಮ್ಯದ ಹಿಂದೂಸ್ತಾನ್ ಲೈಫ್ ಕೇರ್ ಲಿಮಿಟೆಡ್ ನ್ಯಾಪ್ ಕಿನ್ ವಿತರಿಸುತ್ತಿತ್ತು. ಗ್ರಾಮೀಣ ಭಾಗದ ಹದಿಹರೆಯದ ಹೆಣುಮಕ್ಕಳು ಸರಕಾರದಿಂದ ಸಾನಿಟರಿ ನ್ಯಾಪ್ ಕಿನ್ ಗಳು ಸಿಗದೆ, ಅತ್ತ ಹಣ ಕೊಟ್ಟು ಖರೀದಿಸಲೂ ಆಗದೆ 3 ದಿನಗಳ ಕಾಲ ಶಾಲೆಗೆ ಬರುವುದನ್ನು ನಿಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಶುಚಿತ್ವ ಕಾಪಾಡಿಕೊಳ್ಳಲಾಗದೆ ಚರ್ಮರೋಗ, ಮೂತ್ರರೋಗ ಮತ್ತಿತರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ.**

**ಪ್ರಸ್ತುತ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಸರ್ಕಾರ ತಕ್ಷಣವೇ ಹದಿಹರೆಯದ ಸರ್ಕಾರಿ ಶಾಲಾ ಮತ್ತು ಕಾಲೇಜು ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್ ಕಿನ್ ಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕೆನ್ನುವ ವಿಷಯಕ್ಕೆ ಆರೋಗ್ಯ, ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:-**

*******

2013-14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ನೀಡಲು **"ಶುಚಿ"** ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕಮದಡಿಯಲ್ಲಿ ಹದಿಹರೆಯದ ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳಿಗೆ ತಲಾ ಒಂದರಂತೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ಪಾಕೆಟ್‌ಗಳನ್ನು ವಿತರಿಸಲಾಗುತ್ತಿದೆ. ಇದರ ಉದ್ದೇಶ ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವದ ಬಗ್ಗೆ ಅರಿವು ಮೂಡಿಸುವುದು, ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗದ ಬಗ್ಗೆ ತಿಳುವಳಿಕೆ

ನೀಡುವುದು, ಸಮುದಾಯ ಮತ್ತು ವಿಶೇಷವಾಗಿ ಹದಿಹರೆಯದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸುವುದು ಹಾಗೂ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸುವುದು ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ.

ಈ ಯೋಜನೆಯ ಫಲಾನುಭವಿಗಳು ಸರ್ಕಾರಿ, ಅನುದಾನಿತ ಹಾಗೂ ಸರ್ಕಾರಿ ವಸತಿ ಶಾಲೆಯ 6 ರಿಂದ 12ನೇ (10 ರಿಂದ 18 ವರ್ಷದ) ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹದಿಹರೆಯದ ಹೆಣ್ಣು ಮಕ್ಕಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಬರುವ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿನ 10 ರಿಂದ 18 ವರ್ಷದ) ಹದಿಹರೆಯದ ಹೆಣ್ಣು ಮಕ್ಕಳು ಆಗಿರುತ್ತಾರೆ. ಸದರಿ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ 19,29,355.

2019-20ರ ಆರ್ಥಿಕ ವರ್ಷದಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆಯದ ಕಾರಣ ಸಂಗ್ರಹಣೆಯ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. 2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಅನುದಾನ ಪೂರೈಕೆಯಾಗಿರುವುದಿಲ್ಲ. ಆದ್ದರಿಂದ ಘೋಷಿತ ಅನುದಾನವನ್ನು ಹಿಂಪಡೆಯಲಾಗಿರುತ್ತದೆ.

2021-22ನೇ ಸಾಲಿನಲ್ಲಿ ರೂ.4700.00 ಲಕ್ಷಗಳ ಅನುದಾನವನ್ನು KSMSCL ರವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಅದರಂತೆ ಸದರಿ ಅನುದಾನದಡಿ ಕಾರ್ಯಕ್ರಮ ಬೇಡಿಕೆಯಂತೆ ಒಟ್ಟು ರೂ2.31 ಕೋಟಿ ಸ್ಯಾನಿಟರಿ ನ್ಯಾಪ್ ಕಿನ್ ಯುನಿಟ್‌ಗಳ ಸಂಗ್ರಹಣೆಗಾಗಿ KSMSCL ವತಿಯಿಂದ ಟೆಂಡರ್ ಕರೆಯಲಾಗಿದೆ.

2021-22ರ ಆರ್ಥಿಕ ವರ್ಷದಲ್ಲಿ ಸಂಗ್ರಹಣೆ ಪ್ರಕ್ರಿಯೆಯು ಚಾಲನೆಗೊಳಿಸಲಾಗಿ, ಇಲ್ಲಿಯವರೆಗೆ ಸತತ 03-ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ ಕಾರಣಾಂತರಗಳಿಂದ ಸದರಿ ಪ್ರಥಮ ಟೆಂಡರ್‌ಗಳು ವಿಫಲವಾಗಿ ವಿಭಾಗೀಯವಾರು ಕರೆದಿರುವ 03 ಟೆಂಡರ್ ಯಶಸ್ವಿಗೊಂಡು ಶೀಘ್ರದಲ್ಲಿ ಕಾರ್ಯಾದೇಶ ನೀಡಲಾಗುತ್ತಿದೆ ವಿವರಗಳು ಕೆಳಗಿನಂತಿವೆ

- ಪ್ರಥಮ ಟೆಂಡರ್ ಕರೆಯಲ್ಲಿ KSMSCL ವತಿಯಿಂದ ಕರೆಯಲಾದ ಟೆಂಡರ್ ನಲ್ಲಿ ಭಾಗವಹಿಸಿದ ಬಿಡ್ ದಾರರುಗಳು ಸಲ್ಲಿಸಿರುವ ಮಾದರಿಗಳು (Samples) ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾದ ಕಾರಣ ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ವಿಫಲಗೊಂಡಿರುತ್ತದೆ.

- ದ್ವಿತೀಯ ಟೆಂಡರ್ ಕರೆಯಲ್ಲಿ ಪ್ರಥಮ ಟೆಂಡರ್ ವೈಫಲ್ಯದ (IND-842 Dated:07.09.2021) ಹಿನ್ನಲೆಯಲ್ಲಿ ಇಲಾಖೆ ವತಿಯಿಂದ ಪರಿಷ್ಕೃತ ತಾಂತ್ರಿಕ ವೈಶಿಷ್ಟತೆಗಳನ್ನು ರಚಿಸಲಾಗಿ ಮರು ಟೆಂಡರ್ ಕರೆಯಲಾಗಿರುತ್ತದೆ.

- ಸದರಿ ದ್ವಿತೀಯ ಟೆಂಡರ್‌ನ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಗಳು ಯಶಸ್ವಿಯಾಗಿ ಪೂರ್ಣಗೊಂಡಿರುತ್ತದೆ. (ಸಫಲಾವಾಗಿರುತ್ತದೆ). ಆದರೆ, ಸದರಿ ಟೆಂಡರ್‌ನ ಯಶಸ್ವಿ L1 ಬಿಡ್ ದಾರರು ಪೂರ್ಣ ಪ್ರಮಾಣದ ದಾಸ್ತಾನುಗಳನ್ನು ನಿಗದಿತ ಅವಧಿಯೊಳಗೆ ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಟೆಂಡರ್ ಕರೆ ವಿಫಲವಾಗಿರುತ್ತದೆ.

- ತೃತೀಯ ಟೆಂಡರ್ ಕರೆಯಲ್ಲಿ ಟೆಂಡರ್ ಕರೆ 1 ಮತ್ತು 2ರ ವೈಫಲ್ಯಗಳ ಹಿನ್ನಲೆಯಲ್ಲಿ ಸರ್ಕಾರದ ಅನುಮೋದನೆ ಮೇರೆಗೆ ವಿಭಾಗೀಯವಾರು ಬಿಡ್ ಸಲ್ಲಿಸುವ ಏಕ ಟೆಂಡರ್ ಅನ್ನು ಕರೆಯಲಾಗಿದೆ. ತಾಂತ್ರಿಕ ಮತ್ತು ಆರ್ಥಿಕ ಬಿಡ್ ಗಳು ಯಶಸ್ವಿಗೊಂಡಿರುತ್ತದೆ. ಶೀಘ್ರದಲ್ಲಿ ವಿಭಾಗೀಯವಾರು ಕಾರ್ಯಾದೇಶ ನೀಡಿ ಶುಚಿ ಕಾರ್ಯಕ್ರಮದಡಿ ರಾಜ್ಯಾದ್ಯಂತ ಮಕ್ಕಳಿಗೆ (ಫಲಾನುಭವಿಗಳಿಗೆ) ಸ್ಯಾನಿಟರಿ ನ್ಯಾಪ್ ಕಿನ್ ಪ್ಯಾಡ್ ಗಳನ್ನು ಪೂರೈಸುವಲ್ಲಿ ಆದ್ಯತೆಯ ಮೇಲೆ ಕ್ರಮವಹಿಸಲಾಗುವುದು.

**ಕಡತ ಸಂಖ್ಯೆ: ಆಕುಕ ಶೂನ್ಯ ವೇಳೆ/ಯು ಬಿ ವೆಂಕಟೇಶ್**

**(ಡಾ.ಕೆ ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯವಾದ ದಿನಾಂಕ.8-12-2022ರ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ "ಶುಚಿ ಯೋಜನೆಗೆ ಗ್ರಹಣ"- 3 ವರ್ಷದಿಂದ ಸ್ಯಾನಿಟರಿ ನ್ಯಾಪ್ ಕಿನ್ ವಿತರಣೆ ಸ್ಥಗಿತ ವಿಚಾರವು ವರದಿಯಾಗಿರುತ್ತದೆ.**

**ರಾಜ್ಯದ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳಲ್ಲಿ, ಓದುತ್ತಿರುವ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್ ಕಿನ್ ವಿತರಿಸುವ "ಶುಚಿ ಯೋಜನೆ" ಜಾರಿಗೆ ತಂದಂಥ ಸರ್ಕಾರ ಕೆಲವೇ ವರ್ಷಗಳಲ್ಲಿ ಯೋಜನೆಯನ್ನು ತೆರೆಗೆ ಸರಿಸುತ್ತಿರುವ ಬಗ್ಗೆ, ಅನುಮಾನ ವ್ಯಕ್ತವಾಗಿದ್ದು, ಕೋವಿಡ್ ತರುವಾಯ ಶುಚಿ ಯೋಜನೆ ಸ್ಥಗಿತಗೊಂಡಿದೆ.**

**ಹೆಣ್ಣುಮಕ್ಕಳು ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಲಿ ಎಂಬ ಉದ್ದೇಶದಿಂದ ಜಾರಿಗೆ ತಂದಂಥ ಈ ಯೋಜನೆಯ ಜವಾಬ್ದಾರಿಯನ್ನು ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತವು ನ್ಯಾಪ್ ಕಿನ್ ಖರೀದಿಸಿ ವಿತರಿಸುವ ಹೊಣೆ ಹೊತ್ತಿತ್ತು. ಅಂದಾಜು 47 ಕೋಟಿ ರೂ. ವೆಚ್ಚದ ಯೋಜನೆಯಡಿ ಸುಮಾರು 20 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಇದ್ದಾರೆ, ಇದೀಗ ಅಧಿಕಾರಿಗಳ ನಿರ್ಲಕ್ಷದಿಂದಾಗಿ ಯೋಜನೆ ಸ್ಥಗಿತಗೊಂಡಿರುವುದು ತಿಳಿದುಬಂದಿರುತ್ತದೆ. ಕಳೆದ ಮೂರು ವರ್ಷಗಳಿಂದ ಬರೀ ಟೆಂಡರ್ ಕರೆಯುವುದು ಮತ್ತು ರದ್ದು ಮಾಡುವ ಪ್ರಕ್ರಿಯೆಯಲ್ಲೇ ಅಧಿಕಾರಿಗಳು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿರುತ್ತದೆ.**

**ಈ ಹಿಂದೆ ಸತತ 5 ವರ್ಷಗಳಿಂದ ಸರಕಾರಿ ಸ್ವಾಮ್ಯದ ಹಿಂದೂಸ್ತಾನ್ ಲೈಫ್ ಕೇರ್ ಲಿಮಿಟೆಡ್ ನ್ಯಾಪ್ ಕಿನ್ ವಿತರಿಸುತ್ತಿತ್ತು. ಗ್ರಾಮೀಣ ಭಾಗದ ಹದಿಹರೆಯದ ಹೆಣುಮಕ್ಕಳು ಸರಕಾರದಿಂದ ಸಾನಿಟರಿ ನ್ಯಾಪ್ ಕಿನ್ ಗಳು ಸಿಗದೆ, ಅತ್ತ ಹಣ ಕೊಟ್ಟು ಖರೀದಿಸಲೂ ಆಗದೆ 3 ದಿನಗಳ ಕಾಲ ಶಾಲೆಗೆ ಬರುವುದನ್ನು ನಿಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಶುಚಿತ್ವ ಕಾಪಾಡಿಕೊಳ್ಳಲಾಗದೆ ಚರ್ಮರೋಗ, ಮೂತ್ರರೋಗ ಮತ್ತಿತರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ.**

**ಪ್ರಸ್ತುತ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಸರ್ಕಾರ ತಕ್ಷಣವೇ ಹದಿಹರೆಯದ ಸರ್ಕಾರಿ ಶಾಲಾ ಮತ್ತು ಕಾಲೇಜು ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ನ್ಯಾಪ್ ಕಿನ್ ಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕೆನ್ನುವ ವಿಷಯಕ್ಕೆ ಆರೋಗ್ಯ, ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:-**

*******

2013-14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಹದಿಹರೆಯದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ನೀಡಲು **"ಶುಚಿ"** ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕಮದಡಿಯಲ್ಲಿ ಹದಿಹರೆಯದ ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳಿಗೆ ತಲಾ ಒಂದರಂತೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ಪಾಕೆಟ್‌ಗಳನ್ನು ವಿತರಿಸಲಾಗುತ್ತಿದೆ. ಇದರ ಉದ್ದೇಶ ಹದಿಹರೆಯದವರಲ್ಲಿ ಋತುಸ್ರಾವದ ಶುಚಿತ್ವದ ಬಗ್ಗೆ ಅರಿವು ಮೂಡಿಸುವುದು, ಹದಿಹರೆಯದವರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಬಳಕೆ ಹಾಗೂ ಉಪಯೋಗದ ಬಗ್ಗೆ ತಿಳುವಳಿಕೆ

ನೀಡುವುದು, ಸಮುದಾಯ ಮತ್ತು ವಿಶೇಷವಾಗಿ ಹದಿಹರೆಯದವರಲ್ಲಿ ಋತುಸ್ರಾವ ನೈರ್ಮಲ್ಯದ ಕುರಿತು ದೃಷ್ಟಿಕೋನ ಬದಲಾಯಿಸುವುದು ಹಾಗೂ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದರ ಮುಖಾಂತರ ಬಳಕೆಯನ್ನು ಪ್ರೋತ್ಸಾಹಿಸುವುದು ಹಾಗೂ ಮುಟ್ಟಿನ ವೈಜ್ಞಾನಿಕ ನಿರ್ವಹಣೆಯ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ.

ಈ ಯೋಜನೆಯ ಫಲಾನುಭವಿಗಳು ಸರ್ಕಾರಿ, ಅನುದಾನಿತ ಹಾಗೂ ಸರ್ಕಾರಿ ವಸತಿ ಶಾಲೆಯ 6 ರಿಂದ 12ನೇ (10 ರಿಂದ 18 ವರ್ಷದ) ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹದಿಹರೆಯದ ಹೆಣ್ಣು ಮಕ್ಕಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಅಡಿಯಲ್ಲಿ ಬರುವ ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿನ 10 ರಿಂದ 18 ವರ್ಷದ) ಹದಿಹರೆಯದ ಹೆಣ್ಣು ಮಕ್ಕಳು ಆಗಿರುತ್ತಾರೆ. ಸದರಿ ಯೋಜನೆಯ ಒಟ್ಟು ಫಲಾನುಭವಿಗಳ ಸಂಖ್ಯೆ 19,29,355.

2019-20ರ ಆರ್ಥಿಕ ವರ್ಷದಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆಯದ ಕಾರಣ ಸಂಗ್ರಹಣೆಯ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. 2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಅನುದಾನ ಪೂರೈಕೆಯಾಗಿರುವುದಿಲ್ಲ. ಆದ್ದರಿಂದ ಘೋಷಿತ ಅನುದಾನವನ್ನು ಹಿಂಪಡೆಯಲಾಗಿರುತ್ತದೆ.

2021-22ನೇ ಸಾಲಿನಲ್ಲಿ ರೂ.4700.00 ಲಕ್ಷಗಳ ಅನುದಾನವನ್ನು KSMSCL ರವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಅದರಂತೆ ಸದರಿ ಅನುದಾನದಡಿ ಕಾರ್ಯಕ್ರಮ ಬೇಡಿಕೆಯಂತೆ ಒಟ್ಟು ರೂ2.31 ಕೋಟಿ ಸ್ಯಾನಿಟರಿ ನ್ಯಾಪ್ ಕಿನ್ ಯುನಿಟ್‌ಗಳ ಸಂಗ್ರಹಣೆಗಾಗಿ KSMSCL ವತಿಯಿಂದ ಟೆಂಡರ್ ಕರೆಯಲಾಗಿದೆ.

2021-22ರ ಆರ್ಥಿಕ ವರ್ಷದಲ್ಲಿ ಸಂಗ್ರಹಣೆ ಪ್ರಕ್ರಿಯೆಯು ಚಾಲನೆಗೊಳಿಸಲಾಗಿ, ಇಲ್ಲಿಯವರೆಗೆ ಸತತ 03-ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ ಕಾರಣಾಂತರಗಳಿಂದ ಸದರಿ ಪ್ರಥಮ ಟೆಂಡರ್‌ಗಳು ವಿಫಲವಾಗಿ ವಿಭಾಗೀಯವಾರು ಕರೆದಿರುವ 03 ಟೆಂಡರ್ ಯಶಸ್ವಿಗೊಂಡು ಶೀಘ್ರದಲ್ಲಿ ಕಾರ್ಯಾದೇಶ ನೀಡಲಾಗುತ್ತಿದೆ ವಿವರಗಳು ಕೆಳಗಿನಂತಿವೆ

- ಪ್ರಥಮ ಟೆಂಡರ್ ಕರೆಯಲ್ಲಿ KSMSCL ವತಿಯಿಂದ ಕರೆಯಲಾದ ಟೆಂಡರ್ ನಲ್ಲಿ ಭಾಗವಹಿಸಿದ ಬಿಡ್ ದಾರರುಗಳು ಸಲ್ಲಿಸಿರುವ ಮಾದರಿಗಳು (Samples) ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾದ ಕಾರಣ ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ವಿಫಲಗೊಂಡಿರುತ್ತದೆ.

- ದ್ವಿತೀಯ ಟೆಂಡರ್ ಕರೆಯಲ್ಲಿ ಪ್ರಥಮ ಟೆಂಡರ್ ವೈಫಲ್ಯದ (IND-842 Dated:07.09.2021) ಹಿನ್ನಲೆಯಲ್ಲಿ ಇಲಾಖೆ ವತಿಯಿಂದ ಪರಿಷ್ಕೃತ ತಾಂತ್ರಿಕ ವೈಶಿಷ್ಟತೆಗಳನ್ನು ರಚಿಸಲಾಗಿ ಮರು ಟೆಂಡರ್ ಕರೆಯಲಾಗಿರುತ್ತದೆ.